ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಸಂಸತ್- ಅಧಿವೇಶನ (ಇ-ಅಧಿವೇಶನ)

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ

ದಿನಾಂಕ : DATE : 4/6/2020

# ಎನ್‌ಐಸಿ ಪೋರ್ಟಲ್‌ಗಳ ಮೂಲಕ ಅಧಿವೇಶನ?

## ವರ್ಚುವಲ್ ಕಲಾಪಕ್ಕೆ ಸಜ್ಜಾಗುತ್ತಿದೆ ವೇದಿಕೆ | ಸುರಕ್ಷತೆ ಕಾರಣಕ್ಕೆ ಖಾಸಗಿ ಆ್ಯಪ್‌ಗಳಿಂದ ದೂರ

ನವದೆಹಲಿ: ಭಾರತದ ಇತಿಹಾಸದಲ್ಲಿ ಮೊದಲ ಬಾರಿ ಆನ್‌ಲೈನ್ ಮೂಲಕ (ವರ್ಚುವಲ್ ಅಧಿವೇಶನ) ಸಂಸತ್ ಅಧಿವೇಶನ ನಡೆಸುವ ಕುರಿತು ರಾಜ್ಯಸಭಾ ಸಭಾಪತಿ ಮತ್ತು ಲೋಕಸಭೆ ಸ್ಪೀಕರ್ ಚರ್ಚಿಸಿದ ಬೆನ್ನಲ್ಲೇ ಇ-ಅಧಿವೇಶನ ನಡೆಸಲು ಸದ್ದಿಲ್ಲದೆ ವೇದಿಕೆ ಸಜ್ಜಾಗುತ್ತಿದೆ.

ಈ ನಿಟ್ಟಿನಲ್ಲಿ ಹಾಲಿ ಇರುವ ಸುರಕ್ಷಿತ ಇ-ಪೋರ್ಟಲ್‌ಗಳನ್ನೇ ಬಳಸಿಕೊಂಡು ಸಂಸದರು ತಾವು ಇರುವ ಸ್ಥಳದಿಂದಲೇ ಮುಂಗಾರು ಅಧಿವೇಶನದಲ್ಲಿ ಪಾಲ್ಗೊಳ್ಳುವಂತೆ ಮಾಡುವ ಸಾಧ್ಯತೆಗಳ ಪರಿಶೀಲನೆ ನಡೆದಿದೆ. ಈ ನಿಟ್ಟಲ್ಲಿ ನ್ಯಾಷನಲ್ ಇನ್ಫಾರ್ಮ್ಯಾಟಿಕ್ಸ್ ಸೆಂಟರ್ (ಎನ್‌ಐಸಿ) ನಿರ್ವಹಿಸುತ್ತಿರುವ mprs.nic.in ಮತ್ತು membersls.nic.in ಇ-ಪೋರ್ಟಲ್‌ಗಳನ್ನು ಬಳಸಿಕೊಳ್ಳಲು ಚಿಂತನೆ ನಡೆದಿದೆ.

ಪ್ರಸ್ತುತ ಸದಸ್ಯರು ಲೋಕಸಭೆ ಮತ್ತು ರಾಜ್ಯಸಭೆ ವೆಬ್‌ಸೈಟ್‌ಗಳನ್ನು ಆನ್‌ಲೈನ್ ನೋಟಿಸ್ ನೀಡುವುದಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಇದರೊಂದಿಗೆ ಉಭಯ ಸದನಗಳಿಗೆ ಸಂಬಂಧಿಸಿದ ಪ್ರಮುಖ ವರದಿಗಳು ಹಾಗೂ ಸಭೆಗೆ ಸಂಬಂಧಿಸಿದ ಸುತ್ತೋಲೆಗಳನ್ನು ತಲುಪಿಸಲು ಕಾರ್ಯದರ್ಶಿಗಳು ಸಹ ಈ ವೆಬ್‌ಸೈಟ್‌ಗಳನ್ನು ಬಳಸುತ್ತಾರೆ. ಈಗ ಯೂಸರ್ ನೇಮ್ ಮತ್ತು ಡಿಜಿಟಲ್ ಸಹಿ ಬಳಸಿಕೊಂಡು ಎಂಪಿಗಳು ಎನ್‌ಐಸಿ ಪೋರ್ಟಲ್‌ಗಳನ್ನು ಪ್ರವೇಶಿಸಲು ಅವಕಾಶ ನೀಡಲಾಗುತ್ತಿದೆ.

ಸಂಸದರು ಸದನದ ಚರ್ಚೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಬಹುದು ಎಂಬ ಉದ್ದೇಶದಿಂದಲೇ ಸರ್ಕಾರವು ಪೋರ್ಟಲ್‌ಗಳನ್ನು ರೂಪಿಸಿದ್ದು, ದೇಶದಲ್ಲಿ ಕೊರೊನಾ ವೈರಸ್ ಸೋಂಕು ಇರುವ ಕಾರಣ ದೆಹಲಿವರೆಗೆ ಪ್ರಯಾಣಿಸಲು ಬಯಸದವರಿಗೆ ವರ್ಚುವಲ್ ಅಧಿವೇಶನದಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಲಾಗುತ್ತಿದೆ.

### 2 ವಾರದ ಅಧಿವೇಶನ

**ಈ ಬಾರಿಯ ಮುಂಗಾರು ಅಧಿವೇಶನ ಒಂದು ತಿಂಗಳ ಬದಲು ಎರಡು ವಾರ ಮಾತ್ರ ನಡೆಯುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಕೊರೊನಾಗೆ ಸಂಬಂಧಿಸಿದ ವಿಷಯಗಳು, ಕೊರೊನಾ ನಿರ್ವಹಣೆ, ಆರ್ಥಿಕ ಪ್ಯಾಕೇಜ್‌ಗಳಿಗೆ ಸಂಬಂಧಿಸಿದ ವಿಷಯಗಳು ಮಾತ್ರ ಚರ್ಚೆಗೆ ಬರುವ ಸಾಧ್ಯತೆ ಇದೆ. ಬಜೆಟ್ ಮಂಡನೆ ಬಳಿಕ ಅನಿರೀಕ್ಷಿತ ಸಮಸ್ಯೆಗಳು ಎದುರಾಗಿದ್ದು, ವಿವಿಧ ಅಗತ್ಯಗಳಿಗೆ ಮೀಸಲಿಟ್ಟಿದ್ದ ಹಣವನ್ನು ಆರ್ಥಿಕ ಪ್ಯಾಕೇಜ್‌ಗೆ ಬಳಸಿಕೊಳ್ಳಲಾಗಿದೆ.**

### ಎನ್‌ಐಸಿ ಪೋರ್ಟಲ್‌ಗಳೇ ಏಕೆ?

ಹೆಚ್ಚಿನ ಸಂಖ್ಯೆಯ ಸದಸ್ಯರು ಸೇರಿಕೊಂಡು ಸಭೆ ನಡೆಸಲೆಂದೇ ಜೂಮ್, ಮೈಕ್ರೋಸಾಫ್ಟ್ ಟೀಮ್ಸ್ ರೀತಿಯ ವಿಡಿಯೋ ಕಾನ್ಫರೆನ್ಸಿಂಗ್ ಆ್ಯಪ್‌ಗಳಿವೆ. ಅವುಗಳ ಮೂಲಕವೇ ದೇಶದ ಸಂಸದರು ಅಧಿವೇಶನದಲ್ಲಿ ಪಾಲ್ಗೊಳ್ಳಬಹುದು. ಆದರೆ, ಅಸುರಕ್ಷಿತ ಎಂಬ ಕಾರಣಕ್ಕೇ ಕೇಂದ್ರ ಸರ್ಕಾರ ಜೂಮ್ ಆ್ಯಪ್ ಅನ್ನು ಬಳಸದಂತೆ (ಸರ್ಕಾರದ ಮಟ್ಟದಲ್ಲಿ) ಸೂಚನೆ ನೀಡಿದೆ. ಹೀಗಾಗಿ ಅತ್ಯಂತ ಸುರಕ್ಷಿತವಾಗಿರುವ ಎನ್‌ಐಸಿಯ 'ಹೈಬ್ರಿಡ್ ವರ್ಷನ್' ಪೋರ್ಟಲ್‌ಗಳನ್ನೇ ಬಳಸಲು ಉದ್ದೇಶಿಸಲಾಗಿದೆ. ಈಗಾಗಲೇ ನೋಟಿಸ್ ಮತ್ತಿತರ ಉದ್ದೇಶಗಳಿಗಾಗಿ ಸಂಸತ್ ಸದಸ್ಯರು ಇವುಗಳನ್ನು ಬಳಸುತ್ತಿರುವುದರಿಂದ ಪೋರ್ಟಲ್‌ಗಳ ಪರಿಚಯವೂ ಅವರಿಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.